**ಅಧಿಕ ಸಿವಿಲ್ ಜಡ್ಜ್ ಮತ್ತು ಜೆಎಂಎಫ್ ಸಿ ನ್ಯಾಯಾಲಯ, ಗುಬ್ಬಿ**

**ದಿನಾಂಕಃ-04.07.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ .ಕೆ.ಎಸ್.ಎಸ್.ವಕೀಲರಿಂದಃ**

ಈ ದಾವೆಯನ್ನು ನಾನು 4 ಆಸ್ತಿಗಳ ಮೇಲೆ ವಿಭಾಗ ಕೋರಿ ಸಲ್ಲಿಸಿರುತ್ತೇನೆ. ಅವುಗಳೆಂದರೆ ಸ.ನಂಃ48/3 , ಸ.ನಂಃ 20/3 , ಉಳಿದ ಎರಡು ಆಸ್ತಿಗಳ ಸ.ನಂ ನಾನು ಮರೆತಿರುತ್ತೇನೆ. ದಾವಾ ಆಸ್ತಿಗಳ ವಿಸ್ತೀರ್ಣ ಮತ್ತು ಚಕ್ಕುಬಂದಿಗಳು ನನಗೆ ಮರೆತು ಹೋಗಿರುತ್ತದೆ. ಪ್ರತಿವಾದಿಗಳಿಗೆ ದಾವಾಸ್ವತ್ತುಗಳು ಹೇಗೆ ಬಂದಿರುತ್ತವೆ ಎಂಬ ಪ್ರಶ್ನೆಗೆ ಸಾಕ್ಷಿಯು ದಾವಾ ಆಸ್ತಿಗಳು ನನ್ನ ತಂದೆಯ ಹೆಸರಿನಲ್ಲಿರುತ್ತವೆ ಎನ್ನುತ್ತಾರೆ. ದಾವಾ ಆಸ್ತಿಗಳನ್ನು ನನ್ನ ತಂದೆ ಮತ್ತು ನಾವುಗಳೆಲ್ಲಾ ಒಟ್ಟಿಗೆ ಇದ್ದಾಗ ದುಡಿದುತೆಗೆದುಕೊಂಡ ಆಸ್ತಿಗಳಾಗಿರುತ್ತವೆ. ದಾವಾ ಆಸ್ತಿಗಳನ್ನು ಯಾವಾಗ ಖರೀದಿಸಿರುತ್ತೇವೆ ಮತ್ತು ಅವುಗಳ ಕ್ರಯಪತ್ರಕ್ಕೆ ಸಂಬಂದಿಸಿದಂತೆ ನನಗೆ ಈಗ ಏನೂ ಹೇಳಲಾಗುವುದಿಲ್ಲ. ಪ್ರತಿವಾದಿಯರ ಕುಟುಂಬಕ್ಕೆ ನಾನು ಸೇರಿಲ್ಲದೇ ಇರುವುದರಿಂದ ನನಗೆ ದಾವಾ ಆಸ್ತಿಗಳ ಬಗ್ಗೆ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ನಿ.ಪಿ.4 ವಂಶವೃಕ್ಷವನ್ನುನಾನೇ ಹೇಳಿ ಬರೆಸಿ ತಂದು ಹಾಜರುಪಡಿಸಿರುತ್ತೇನೆ. ನಿ.ಪಿ.4 ರ ವಂಶವೃಕ್ಷಕ್ಕೆ ಯಾರು ಸಾಕ್ಷಿಯಾಗಿ ಸಹಿ ಮಾಡಿರುವುದಿಲ್ಲ. ನಿ.ಪಿ.4 ರ ವಂಶವೃಕ್ಷಕ್ಕೆ ಗುರುತುಬಲ್ಲವರು ಎಂದು ಯಾರೂ ಸಹಿ ಮಾಡಿರುವುದಿಲ್ಲ. ನಿ.ಪಿ.4 ರ ವಂಶವೃಕ್ಷವು ಯಾವಾಗ ತಯಾರಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ.

**ಮುಂದುವರಿದ ಪಾಟೀಸವಾಲಿಗೆ ಸಮಯಾವಕಾಶ ಕೋರಿದ್ದು ಸಮಯಾವಕಾಶ ನೀಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಅಧಿಕ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್ ಸಿ , ಗುಬ್ಬಿ.**